**ವ್ಯಾಖ್ಯಾನ**

# <u>ಗಸಗಸೆಎಣಿಸೋದುಕಂಡೆ</u>

ಸುಳ್ಳು ನಮ್ಮಲ್ಲಿಲ್ಲವಯ್ಯ
ಸುಳ್ಳೇ ನಮ್ಮನಿ ದೇವರು || ಪ ||

ಇಲಿಯು ಒಲೆಯ ಚಾಚುದು ಕಂಡೆ
ಬೆಕ್ಕು ಭಕ್ಕರಿ ಮಾಡುದು ಕಂಡೆ
<u>ಮೆಣಸಿನಕಾಯಿ ಕಂಡೆನಪ್ಪ</u>
<u>ಒನಕೆ ಗಡತರ</u> || 1 ||
(ಮೆಕ್ಕಿ <u>ಕಾಯಿ</u> ಕಂಡೇನಪ್ಪ ತೆಕ್ಕೆ ಗಡತರ)

ಕಪ್ಪೆ ಪಾತರ ಕುಣಿವುದು ಕಂಡೆ
ಏಡಿ ಮದ್ದಲೆ ಬಾರಿಸುದು ಕಂಡೆ
ಮೆಕ್ಕಿ ತೆನೆಯ ಕಂಡೇನಪ್ಪ
ತೆಕ್ಕಿ ಗಡತರ || 2 ||
<u>(ಮೆಣಸಿನಕಾಯಿ ಕಂಡೆನಪ್ಪ ಒನಕೆ ಗಡತರ)</u>

ಅರಿಶಿಣ ಬಿತ್ತುವುದು ಕಂಡೆ
ಕಸಕಸೆ ಎಣಿಸೋದು ಕಂಡೆ
ಪುರಂದರ ವಿಠಲನ ಪಾದವ ಕಂಡೆ
ಪರ್ವತ ಗಡತರ || 3 ||

## ಕೀರ್ತನೆಯ ಚಿಂತನೆ:

ಗಸಗಸೆಎಣಿಸೋದುಕಂಡೆ –

ಗಸಗಸೆ ಎಣಿಸುವದನ್ನು, ಅರಿಷಿಣ ಪುಡಿ ಬಿತ್ತುವದನ್ನೂ ಕಂಡರಂತೆ ಜ್ಞಾನಿವರೇಣ್ಯ ಪುರಂದರದಾಸರು.

ಎರಡೂ ಅಸಾಧ್ಯಗಳೇ. ಪುಡಿ ಬಿತ್ತಿ ಅರಿಷಣ ಬೆಳೆಯಲಾಗದು. ಗಸಗಸೆ ಕಾಳು ಪ್ರತ್ಯೇಕವಾಗಿ ಕೈಯಲ್ಲಿ

ಹಿಡಿಯುವುದು ಕಷ್ಟ. ಹಿಡಿದಿದ್ದನ್ನು ಎಣಿಸುವದು ಇನ್ನೂ ಕ್ಲಿಷ್ಟ. ಎಣಿಸಿ ಮಾಡುವದೇನು? ಹೀಗೆ ಇವೆರಡೂ ಅಸಾಧ್ಯ, ಅಸಂಭವ. ಹಾಗಾದರೆ ಜ್ಞಾನಿಗಳು ಅಂದದ್ದೇಕೆ? —

ಹೀಗೊಂದುವಿಚಾರ –

ಅರಿಷಿಣ ಮತ್ತು ಗಸಗಸೆ ಎರಡನ್ನೂ ಕಾಲ ಮತ್ತು ಕರ್ಮ ಅನ್ನೋಣ. ಅರಿಷಿಣ ಮತ್ತು ಖಸಖಸಿಯ ಕಣಗಳು ಅತಿ ಚಿಕ್ಕವು. ಬಹಳಷ್ಟು ಒಟ್ಟುಗೂಡಿದಾಗ ರಾಶಿ ರೂಪದಿ ಕಾಣುವವು. ಹೀಗೆ ರಾಶಿ ದೊಡ್ಡದು. ಪ್ರತಿ ಕಣ ಚಿಕ್ಕದು.

ಅಂತೆಯೇ ಕಾಲ. ಒಟ್ಟಿನಲ್ಲಿ ಬಹು ದೊಡ್ಡದು. ಅಖಂಡ ಕಾಲ. ಪ್ರವಾಹತಃ ನಿತ್ಯ. ಆಯುಷ್ಯ ಶತಮಾನ. ಅದರಲ್ಲಿ ವರ್ಷಗಳು ನೂರು. ಪ್ರತಿ ವರ್ಷಕ್ಕೆ ೩೬೦ ದಿನ. ದಿನ ಒಂದಕ್ಕೆ ೨೪ ಗಂಟೆ. ಗಂಟೆಗೆ ೬೦ ನಿಮಿಷ. ನಿಮಿಷಕ್ಕೆ ೬೦ ಸೆಕೆಂಡು. ಮತ್ತೆ ಅವನ್ನೂ ವಿಭಾಗಿಸಿ ಕ್ಷಣದ ಕಣಗಳನ್ನು ಮಾಡಬಹುದು. ಖಸಖಸಿಯ, ಅರಿಷಿಣದ ಕಣಗಳಂತೆ.

ಕರ್ಮಗಳೂ ಅಷ್ಟೇ. ಆಯುಷ್ಯದ ತುಂಬೆಲ್ಲ ಮಾಡಿದ ಕರ್ಮಗಳದ್ದು ದೊಡ್ಡ ರಾಶಿ. ವರ್ಷ, ದಿನಗಳಲ್ಲಿ ಮಾಡಿದ್ದು ಇನ್ನೂ ಚಿಕ್ಕವು. ಗಂಟೆ ನಿಮಿಷಗಳಲ್ಲಿ ಮತ್ತೆ ಚಿಕ್ಕದಾಗುತ್ತದೆ. ಕ್ಷಣದಲ್ಲಂತೂ ಅತೀ ಚಿಕ್ಕ ಕರ್ಮಗಳು. – ಅರಿಷಿಣ ಪುಡಿಯ ಕಣದಂತೆ.

ಕರ್ಮ ಚಿಕ್ಕದಿದ್ದರೂ ಅದರ ಫಲ ದೊಡ್ಡದಿರ ಬಹುದು. ಕ್ಷಣಮಾತ್ರದಲ್ಲಿ ಕೆಟ್ಟದ್ದೂ ಮಾಡಬಹುದು, ಒಳ್ಳೆಯದೂ ಮಾಡಬಹುದು. ಬರಿ ಮನಸ್ಸಿನಿಂದಲೂ ಕರ್ಮ ಅಕರ್ಮ ವಿಕರ್ಮ ಸಂಭವಿಸುತ್ತವೆ. ಕಾಯಾ ವಾಚಾ ಸಹ ನಡೆಯುತ್ತವೆ. ಒಟ್ಟು ಕರ್ಮ ಮಾಡದೇ ಕ್ಷಣಮಾತ್ರವೂ ಇರಲು ಅಸಾಧ್ಯ. ಶ್ವಾಸೋಚ್ಛ್ವಾಸವೂ ಕರ್ಮವೇ.

ಹೀಗೆ ಕರ್ಮಕ್ಕೆ ಇತಿಮಿತಿಗಳಿಲ್ಲ. ಕ್ಷಣದಲ್ಲಿ ಮಾಡಿದ ಸುಕರ್ಮ ಭಾರೀ ಪುಣ್ಯ ತರಬಹುದು. ಬಹು ಸಮಯವೂ ಹಿಡಿಯಬಹುದು. ಅಂತೆಯೇ ಪಾಪದ ಕರ್ಮವೂ ಹೌದು. ಕರ್ಮಗಳೇ ಪಾಪ, ಪುಣ್ಯಕ್ಕೆ ಕಾರಣ. ಅವುಗಳಿಂದ ಮತ್ತೆ ಕರ್ಮಗಳು. ಮತ್ತೆ ಸುಖ ದುಃಖ ಭೋಗ. ಇದೇ ಸಂಸಾರ ಚಕ್ರ.

ಒಟ್ಟು, ಕರ್ಮದಿಂದ ಕರ್ಮ ಹುಟ್ಟುತ್ತದೆ. ನಿನ್ನೆಯ ಕರ್ಮ ಇಂದಿಗೆ. ಇಂದಿನದು ನಾಳೆಗೆ. ಹೀಗೆಯೇ ಜನುಮ ಜನುಮಾಂತರದ್ದರ ಕಥೆ. ಪೂರ್ವ ಜನ್ಮಗಳ ಕರ್ಮ ವರ್ತಮಾನ, ಭವಿಷ್ಯದಲ್ಲೂ ಫಲ ಕೊಡುತ್ತಿರುತ್ತವೆ.

ನಮ್ಮ ಕರ್ಮ ಅತಿ ಸೂಕ್ಷ್ಮವಾಗಿರಬಹುದು. ಅಲ್ಪವಾಗಿರಬಹುದು. ಅದಕ್ಕೆ ಹಿಡಿದ ಕಾಲವೂ ಅಷ್ಟೇ.

ಸೂಕ್ಷ್ಮತರ. ಆದರೂ ದೂತರು ಈ ಎಲ್ಲ ಲೆಕ್ಕ ಇಡುತ್ತಾರೆ. ಖಸಖಸಿ ಎಣಿಸಲ್ಪಡುತ್ತದೆ ಪರಮಾತ್ಮನ ಸರಕಾರದಲ್ಲಿ. ಸೂಕ್ಷ ಸಮಯವೂ ಗಣಿಸಲ್ಪಡುತ್ತದೆ. ಅರಿಷಿಣ ಪುಡಿ - ಕರ್ಮ ಬಿತ್ತಿ ಬೆಳೆಸಿ ಫಲ ಕೊಡುತ್ತಿರುತ್ತಾರೆ. ಕ್ಷಣಕಾಲವನ್ನೂ ಬಿಡುವದಿಲ್ಲ. ಚಿಕ್ಕ ಕರ್ಮವೂ ತಪ್ಪುವದಲ್ಲ.

ಅದೇನು ದೊಡ್ಡದು? ಚಿಕ್ಕ ಕರ್ಮ. ಮನಸಿನಲ್ಲಿ ಯಾರಿಗೋ ಎಂದೋ ಏನೋ ಕೆಟ್ಟದ್ದು ಬಯಸಿದ್ದು, ಅಂದದ್ದು. ಅದು ಕ್ಷಣಮಾತ್ರದಲ್ಲಿ. ಅದನ್ನೂ ಎಣಿಸುವದೇ? ಅದಕ್ಕೆ ಶಿಕ್ಷೆಯೇ?

ಏನೋ ಒಂದು ಸಣ್ಣ ಉಪಕಾರ ಮಾಡಿದ್ದೆ. ಇಲ್ಲ, ಕೆಟ್ಟ ರೋಗ ಪ್ರಯುಕ್ತವಾಗಲಿ, ಬಿಟ್ಟಿಗಳ ನೆಪದಿಂದಾಗಲಿ, ಥಟ್ಟನೇ ಶ್ರೀಹರಿಯ ನೆನೆದಿದ್ದೆ.

ಅದನ್ನೂ ಗಣಿಸಿ ಅದಕ್ಕೊಂದು ಸೌಭಾಗ್ವವೇ!

ಹೌದು. ಶ್ರೀಮನ್ನಾರಾಯಣನ ಆಡಳಿತ ವೈಖರಿಯದು. ವೈಭವವದು.

**' ನಾಸತೋ ವಿದ್ಯತೇ ಭಾವಃ ನಾಭಾವೋ ವಿದ್ಯತೇ ಸತಃ ' –** ಸತ್ಕರ್ಮಕ್ಕೆ ಸುಖ, ದುಷ್ಕರ್ಮಕ್ಕೆ ದುಃಖ - ಕಟ್ಟಿಟ್ಟ ಬುತ್ತಿ. ಅವು ಅರಿಷಿಣ ಪುಡಿಯ ಕಣದಷ್ಟು ಚಿಕ್ಕವಾಗಿರಲಿ, ಗಸಗಸೆ ಕಾಳಿನಷ್ಟು ಅಲ್ಪ ಕಾಲದಲ್ಲಿ ಮಾಡಿರಲಿ. ಎಲ್ಲವೂ ಎಣಿಸಲ್ಪಡುತ್ತದೆ. ನಮ್ಮ ಹೆಸರಿಗೆ ದಾಖಲಿಸಲ್ಪಡುತ್ತದೆ. Computer Memory ಯಂತೆ ಎಂದೆಂದಿಗಾಗಿಯೂ ಸಂಗ್ರಹಿಸಲ್ಪಡುತ್ತದೆ.

ಅದರ ಫಲಗಳು ಜನುಮ ಜನುಮಗಳಿಗೇ ಆಗಲಿ ಉಣಬಡಿಸಲ್ಪಡುತ್ತವೆ. ತಪ್ಪುವದಿಲ್ಲ. ತಪ್ಪಿಸುವಂತಿಲ್ಲ. ಯಾರೇ ಆಗಲಿ. ಎಂದೇ ಆಗಲಿ.

ಹೀಗೆ ನಮ್ಮ ಕರ್ಮಗಳೇ ನಮ್ಮ ಬಾಳಿನ ಆಗು ಹೋಗುಗಳಿಗೆ ಕಾರಣ. ಹೀಗಾಗಿ ಅವರಿಗೇಕೆ ಸುಖ, ನಮಗೇಕೆ ದುಃಖ - ಪ್ರಶ್ನೆಯೇ ಇಲ್ಲ. ಹಿಂದೆ ಮಾಡಿದ್ದೇ ಇಂದು ಪಡೆದಿದ್ದು. ಮಾಡಿದ ಅಡಿಗೆ ಉಂಡಂತೆ. ಪರಮಾತ್ಮನಿಗೆ ಪಕ್ಷಪಾತ ದೋಷವಿಲ್ಲ. ವೈಷಮ್ಯ ನೈರ್ಘೃಣ್ಯ ಆತನಿಗಿಲ್ಲ.

ಪ್ರತಿ ಜೀವಿ ಜೀವಮಾನದಲ್ಲಿ, ಜನುಮ ಜನುಮಗಳಲ್ಲಿ, ಮಾಡುವ ಪ್ರತಿ ಕ್ಷಣದ ಕರ್ಮಗಳು ಅನಂತ. ಜೀವಿಗಳೂ ಅನಂತ. ಕಾಲವೂ ಅನಂತ. ಹೀಗೆ ಒಟ್ಟು ಕರ್ಮಗಳು ಮತ್ತು ಕಾಲ = ಅನಂತ x ಅನಂತ. = ಅನಂತಾನಂತ.

ಅರಿಷಿಣ ಪುಡಿಯ ಕಣ ಎಣಿಸಬಹುದು. ಗಸಗಸೆ ಎಣಿಸಬಹುದು. ಮರುಳುದಂಡೆಯ ಉಸುಕಿನ ಕಣಗಳ ಎಣಿಸಬಹುದು. ಆದರೆ ಕಾಲ ಕರ್ಮಗಳ ಸೂಕ್ಷ್ಮ ಎಣಿಸಲಾಗದು. ಅವು ಅಸಾಧ್ಯ. ಅಸಂಭವ.

ಆದರೆ ಅಸಾಧ್ಯ ಸಾಧ್ಯವಾಗುತ್ತದೆ. ಅಸಂಭವ ಸಂಭವಿಸುತ್ತದೆ. ಶ್ರೀಹರಿಯ ಸಾಮ್ರಾಜ್ಯದಲ್ಲಿ. ಸೂಕ್ಷ್ಮ ಕಾಲ ಪರಿಗಣಿಸಲ್ಪಡುತ್ತದೆ. ಚಿಕ್ಕ ಕರ್ಮಗಳ ಚೊಕ್ಕ ಲೆಕ್ಕ ಇಡಲ್ಪಡುತ್ತದೆ. ಫಲ ಕೊಡಲ್ಪಡುತ್ತದೆ. ಇದು ದಾಸರ ಮಾತಿನ ತಾತ್ಪರ್ಯವೇನೋ !

ಎಷ್ಟೊಂದು ಅರ್ಥಗಳನ್ನು ಹುದುಗಿಸಿದ್ದಾರೆ, ತತ್ವಗಳನ್ನು ತಿಳಿಸುತ್ತಾರೆ ದಾಸರು !

ಜಗದ ಒಡೆಯ ವಿಠ್ಠಲನನ್ನು ಕಂಡವರು ಅವರು.
ಅಂತೆಯೇ ಅರಿಷಿಣ ಬಿತ್ತುವದು, ಗಸಗಸೆ ಎಣಿಸುವದು ಈ ರೀತಿ, ಹಲವು ರೀತಿ ಕಂಡರು ಪುರುಂದರದಾಸರು.

ತಿಳಿಯಲಾಗದ ಪ್ರಮೇಯವನ್ನು, ಅಪ್ರಮೇಯ ತಿಳಿಸಿದಷ್ಟು ತಿಳಿದು, ತಿಳಿದದ್ದನ್ನು ತಿಳಿಸಿದ - ದಾಸರ ಅಂತರ್ಯಾಮಿ, ಮುಖ್ಯ ಪ್ರಾಣರ ಅಂತರ್ಯಾಮಿ, ಸರ್ವಜ್ಞ ಶ್ರೀ ಲಕ್ಷ್ಮೀ ನರಸಿಂಹ.

ದೇವರಿಗೆ ಸಮರ್ಪಿಸಿ ಸಾಷ್ಟಾಂಗ ನಮಸ್ಕರಿಸೋಣ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ